doc-5810
T-P-2

Reg No B G 155 9 11 72

In The State **First Golden Jubilee Celebrated Paper 'Satyavadi' daily, Mysore 4**

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂಭ್ರಮಿಸಿದ
ಪತ್ರಿಕೆ

ಸತ್ಯವಾದಿ

56th Year of Publication

★

News, Views, Dharmic Moral Ethical Matters

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ.-ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪ,ಸ

ಐದನೆ ಯೋಜನೆಯಲ್ಲಿ ಕುಡಿಯುವ ನೀರು ಹಂಚಿಕೆ ವಿಸ್ತರಣೆ

ಮಗುವಿನ ಬಲಿ

ಕಿಯೋನಜರಘಡ – ಬದಪನಸಾನಸ ಗ್ರಾಮದಲ್ಲಾದ ಉಪದ್ರವ-ಪರಿಸ್ಥಿತಿಯಿಂದ ಸಾರಾಂಗಲು ಅಲ್ಲಿಯ ಜನರು ಅರಣ್ಯ ದೇವತೆಗೆ 3 ವರ್ಷದ ಮಗುವನ್ನು ಬಲಿ ಕೊಟ್ಟರು – ಈ ವಿಚಾರವನ್ನು ಹೊರಪಡಿಸಿದ ಆಪಾದನೆಗಾಗಿ ಅಲ್ಲಿಯ ಜನರು ಒಬ್ಬ ಹೆಂಗಸು ಮತ್ತು ಒಬ್ಬ ಹುಡುಗಿಯನ್ನು ಕೊಂದಿರುವರೆಂದೂ ಪೋಲೀಸರು ಹೇಳುತ್ತಾರೆ – ತನಿಖೆ ನಡೆಯುತ್ತಿದೆ.

ಅಕ್ರಮ ಸಾಗಾಣಿಕೆ

ಪಂಜಿ— ಒಟ್ಟಿಗೆ 15 ಮೈಲಿ ದೂರದಲ್ಲಿ ಒಂದು ಚಿಕ್ಕಗ್ರಾಮದಲ್ಲಿ ಪೋಲೀಸರು ನಡೆಸಿದ ಧಾಳಿಯಲ್ಲಿ ರೂ. 6 ಲಕ್ಷ ಬೆಲೆಯ ಅಕ್ರಮ ಸಾಗಾಣಿಕೆ ಪದಾರ್ಥಗಳು ಸಿಕ್ಕಿದವು

○

ಲೆಟರ್ ಬಾಂಬು

ಬೊಂಬಾಯಿ — ಲೆಟರ್ ಬಾಂಬುಗಳಿರುವನೆಂಬ ಸಂಶಯದಿಂದ ಮೇಲೆ ತಿಳಿಸಿದ ಕೆಲವು ಗಳನ್ನು ಪೋಲೀಸರು ಹಳೇ ವಿಮಾನ ನಿಲ್ದಾಣದಲ್ಲಿ ಅಂಚೇಪದಾರ್ಥಗಳಿಂದ ವಶಪಡಿಸಿಕೊಂಡರು.

○

ಪರಿಣಾಮಕಾರಿಯಾಗಿಲ್ಲ

ನವದೆಹಲಿ— ನಿಕ್ಸನ್ನರು ಮತ್ತೆ ಅಮೆರಿಕಾ ಅಧ್ಯಕ್ಷರಾಗಿ ಚುನಾಯಿತರಾಗಿರುವುದು ಇಲ್ಲೀನೂ ಗಲಬಲಿ ಉಂಟುಮಾಡಿಲ್ಲ

★

ಅಭಿನಂದನೆ

ನವದೆಹಲಿ— ನಿಕ್ಸನ್ನರಿಗೆ ಪ್ರಧಾನಿ ಇಂದಿರಾರವರು ಅಭಿನಂದನೆ ಕಳುಹಿಸಿ, ಎರಡು ದೇಶ ಮತ್ತು ಜನರಲ್ಲಿ ಮೈತ್ರಿ ಭಾವ ಭದ್ರಗೊಳ್ಳಲೆಂದು ಆಶಿಸಿರುವರು

ನಿಕ್ಸನ್ನರು ಪುನಃ ಅಧ್ಯಕ್ಷರಾದರು

ವಾಷಿಂಗ್ಟನ್— ಮತ್ತೊಂದು ಅವಧಿಗೆ ರಿಪಬ್ಲಿಕನ್ನರಾದ ರಿಚರ್ಡ್ ನಿಕ್ಸನ್ನರು ಅಧ್ಯಕ್ಷರಾಗಿ ಚುನಾಯಿತರಾದರು – ಆದಕ್ಕೆ ಕಾಂಗ್ರೆಸ್ಸಿಗೆ ಮತ್ತು ಸೆನೇಟಿಗೆ ಡೆಮೋಕ್ರಾಟ್ ಸದಸ್ಯರೇ ಬಹುಸಂಖ್ಯೆಯಲ್ಲಿರುವುದು ಇವರಿಗೆ ಆತಂಕದಲ್ಲಿ ಸ್ವಲ್ಪ ಕಷ್ಟವೆನ್ನಲಾಗುತ್ತಿದೆ.

★

ಭೂಪರಿಮಿತಿ

ಮಡಕೇರಿ— ಜಪಾನಿನವರು 5 ಎಕ್ರೆ ಭೂ ಪರಿಮಿತಿಯಲ್ಲಿ ಸಾಕಷ್ಟು ಆಹಾರ ಉತ್ಪಾದಿಸುತ್ತಿರುವಾಗ, ನಮ್ಮ ಪರಿಮಿತಿ 10 ಎಕ್ರೆಗಳಿದ್ದರೂ ಯಾಕೆ ನಮ್ಮ ಜನ ಗೊಣಗುತ್ತಿರುವರೆಂದು ನನಗೆ ಗೊತ್ತಾಗಿಲ್ಲವೆಂದು ಶಾಸಕ ಶ್ರೀ ಬೆಳ್ಳಿಯಪ್ಪನವರು ಪತ್ರಿಕೋದ್ಯೋಗಿಗಳ ಸಂಘ ಏರ್ಪಡಿಸಿದ್ದ ವಾದವಿವಾದ ಗೋಷ್ಠಿಯಲ್ಲಿ ಹೇಳಿದರು.

★

ಮನೆಕಂದಾಯ

ಮಂಡ್ಯ — ವಿಸರೀತ ಮನೆ ಕಂದಾಯ ಹೇರುವುದನ್ನು ಪುರಸಭಾ ಸದ್ಯ ಶ್ರೀ ಬಸವಯ್ಯನವರು ತೀವ್ರವಾಗಿ ಆಕ್ಷೇಪಿಸಿದರು

○

ಕರ್ನಾಟಕ ಮಾತೆ

ಎಳು ಕೆನ್ನೆಹರಾಣಿ ಎಳು ಶೂರರ ಖಣಿ
ಎಳು ತೀರದ ವೀರ ರಸದ ವಾಣಿ
ಎಳು ಮಿಂದಿದ ಜಾನಿ ಎಳು ಈ ಸ್ಥಿತಿಗಾಣಿ
ಎಳು ವರ ವರದ ಪಾಣಿ
ಸತ್ತಿರುವವರೆದೆಸೇರು, ಸುತ್ತಿರುವ ವಿಷ ಹೀರು
ಬತ್ತಿರುವುದನ್ಯತರುರಿ ಮತ್ತೆ ತೋರು
ಸತ್ತುಳ್ಳ ನೂರಾರು ಬಿತ್ತುಗಳ ನೀನೂರು
ಕೆತ್ತು ಭಯಬಿಟ್ಟ ಬೇರು.

—ದ. ರಾ. ಬೇಂದ್ರೆ

★

ಕೋಮುವಾರು ಹಾಸ್ಪಲ್

ಬೆಂಗಳೂರು— ಸರಕಾರದ ನೆರವಿನಿಂದ ಕೇವಲ ಕೋಮುವಾರು ಹಾಸ್ಪಲುಗಳ ಸ್ಥಾಪನೆಗೆ ಸರ್ಕಾರ ಪ್ರೋತ್ಸಾಹಿಸುವುದಿಲ್ಲವೆಂಬ ಅಭಿಪ್ರಾಯವನ್ನು ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್‌ರವರು ವ್ಯಕ್ತಪಡಿಸಿರುವರು

★

ಬ್ರಾಹ್ಮಣ ಯುವಕ ಸಮ್ಮೇಳನ

ದಾವಣಗೆರೆ— ಇಲ್ಲಿ ತಾ|| 12 ರಂದು ಕರ್ನಾಟಕ ಬ್ರಾಹ್ಮಣ ಯುವಕ ಸಮ್ಮೇಳನವನ್ನು ನಡೆಸಲು ನಿರ್ಧರಿಸಲಾಗಿದೆ.

★

ಮೋಟಾರು ರ್ಯಾಲಿ

ಕೋಸಿಕೋಡು— ಡಿಸೆಂಬರು 17 ರಿಂದ 23 ರವರೆಗೆ ನಡೆಯುವ 7000 ಕ್ಕೆಎಂ ಅಖಿಲ ಭಾರತ ಹೆದ್ದಾರಿ ಮೋಟಾರು ರ್ಯಾಲಿಗೆ 117 ಪ್ರವೇಶಗಳು ಬಂದಿವೆ.

○

ಅಮೇರಿಕಾದಲ್ಲಿಯ ಚುನಾವಣೆಯಲ್ಲಿ

ವಾಷಿಂಗ್ಟನ್— ಶ್ರೀವೆರರನ್ನು ಅವರ ಮಗ "ನೀನು ಯಾರಿಗೆ ಓಟು ಕೊಟ್ಟೆ" ಎಂದು ಕೇಳಲು ಅವರು "ನಮಗಾಗಿ ಓಟು ಕೊಟ್ಟೆ" ಎಂದು ಉತ್ತರಕೊಟ್ಟರು – ಚಿಕಾಗೋದಲ್ಲಿ ಒಬ್ಬನು ಒಬ್ಬ ಚುನಾವಣಾ ಕಾರ್ಯಕರ್ತನ ಮುಖದ ಮೇಲೆ ಹೊಡೆದು ಓಡಿಹೋಗುತ್ತಿದ್ದಾಗ ಪೋಲೀಸನವನೊಬ್ಬನು ಅವನನ್ನು ಕೊಂದನು——

ಪಿಗಂಟ್ಸ್ ಹತ್ತಿರ ಮತನೀಡಲು ಹೋದ ಒಬ್ಬ ಮಹಿಳೆ ತೀರ ಗಾಬರಿಗೊಂಡು ಅಲ್ಲೇ ಸತ್ತುಹೋದಳು – ನ್ಯೂಟನ್‌ನಲ್ಲಿ 100 ವರ್ಷ ತುಂಬಿದ ಒಬ್ಬ ನಿವೃತ್ತ ಲೇವಾದೇವಿ ಮಾಡುವವನು ಓಟು ಕೊಟ್ಟ – ಅಧ್ಯಕ್ಷತೆಗೆ ಸ್ಪರ್ಧಿಸಿರುವ ಮೆಕ್‌ಗಾರ್ನ್ ರರು ಮತ ನೀಡಿ ಬರುತ್ತಿದ್ದಾಗ ಅವರಿಗೆ ಒಬ್ಬನು 20 ಡಾಲರು ನೋಟನ್ನು ತುರುಕಿದನು.

5 ನೇ ಯೋಜನೆಯಲ್ಲಿ

ಬೆಂಗಳೂರು– 5 ನೇ ಯೋಜನೆಯಲ್ಲಿ ಕುಡಿಯುವ ನೀರು ಸರಬರಾಜು ಮತ್ತು ನಿರ್ಮಲೀಕರಣ ಕಾರ್ಯಕ್ರಮದಲ್ಲಿ 150 ಪಟ್ಟಣಗಳು ಮತ್ತು 3600 ಗ್ರಾಮಗಳನ್ನು ಸೇರಿಸಲು ಯೋಜಿಸಲಾಗಿದೆಯೆಂದು ಆರೋಗ್ಯ ಇಂಜಿನಿಯರರ ಸಮ್ಮೇಳನ ಉದ್ಘಾಟಿಸುತ್ತಾ, ಮುಖ್ಯಮಂತ್ರಿ ಶ್ರೀ ದೇವರಾಜ ಅರಸ್‌ರವರು ಹೇಳಿದರು

★

ವಿದ್ಯುತ್ ಸರಬರಾಜು

ನವದೆಹಲಿ— ಪ್ರಸ್ತುತ ಯೋಜನಾ ಅವಧಿ ಮುಗಿಯುವುದರೊಳಗೆ ದೇಶದ ಶೇಕಡಾ 25 ಗ್ರಾಮಗಳಿಗೆ ವಿದ್ಯುತ್ಚಕ್ತಿ ಸರಬರಾಜಾಗುವುದೆಂದು ಕೇಂದ್ರ ನೀರಾವರಿ ಮತ್ತು ವಿದ್ಯುಚ್ಛಕ್ತಿ ಸಚಿವಾಲಯದ ಆಶಯವಾಗಿದೆ.

○

ವಿದ್ಯಾರಣ್ಯ ಜ್ಯೋತಿ

ಬೆಂಗಳೂರು— ಹಂಪೆಯಿಂದ ತರಲಾಗುವ ವಿದ್ಯಾರಣ್ಯ ಜ್ಯೋತಿಯನ್ನು ಕೆಂಗೇರಿ, ಮದ್ದೂರು, ಶ್ರೀರಂಗಪಟ್ಟಣ ಮಾರ್ಗವಾಗಿ ಮೈಸೂರಿಗೆ ತೆಗೆದುಕೊಂಡುಹೋಗಲಾಗುವುದು – ಮೈಸೂರಿಗೆ ತಾ || 13 ರಂದು ತಲಪುವುದು.

★

ಬೌದ್ಧ ಸನ್ಯಾಸಿ ಮಠಕ್ಕೆ
ಪ್ರಧಾನಿ ಇಂದಿರಾರವರ ಉದಾರ ದಾನ

ತವಾಂಗ್— ಪ್ರಧಾನಿ ಇಂದಿರಾ ಗಾಂಧಿಯವರು ಇಲ್ಲಿಯ ಬೌದ್ಧ ಸನ್ಯಾಸಿ ಮಠದಲ್ಲಿ ಸ್ಕೂಲು ನಿರ್ಮಿಸಲು ರೂ. 30000 ಉದಾರ ದಾನ ಮಾಡಿದರು – ಇದಲ್ಲದೆ ಮಠಕ್ಕೆ ಕೆಲವು ಪಾಠೋಪಕರಣಗಳನ್ನೂ ಕೊಟ್ಟರು.

★

ವಿವಾಹವಿಚ್ಛೇದನೆ ದಾಖಲೆ

ಸಿಂಗಪುರದ 83 ವರ್ಷ ವಯಸ್ಸಿನ ತಾಕ್ ಬುಯಿ ಆಜಿ ವಿವಾಹವಿಚ್ಛೇದನೆಯಲ್ಲಿ ವಿಶ್ವದಾಖಲೆ ಸ್ಥಾಪಿಸಿದ್ದಾನೆ ; ಇವುಗಳಲ್ಲಿ ಮೊದಲು 77 ವಿಚ್ಛೇದನೆಗಳ ನೊಖವ್ದ ಮೆಗಳನ್ನು ಅವನೇ ಹೂಡಿದ್ದ, 78 ನೆಯದನ್ನು ಅವನ ಪತ್ನಿ ಹೂಡಿದ್ದಳು; ನನಗೆ ವಯಸ್ಸಾಗುತ್ತಾ ಬಂತು ಎಂದು ತೋರುತ್ತಿದೆ ಎಂದು ಆಜಿ ಹೇಳಿದ.

ದಿವ್ಯವಾಣಿ

ಕೆಲವೊನ್ಕ್ಕೆ ಇಡೀ ಜೀವಮಾನ ಶ್ರಮಿಸಿದರೂ ಅಳಿಸಲಾರದಷ್ಟು ಕಹಿ ಉಂಟು ಮಾಡುವ ಮಾತನ್ನು ಕೆಲವೇ ನಿಮಿಷಗಳಲ್ಲಿ ಆಡಿಬಿಟ್ಟಿರುತ್ತೇವೆ.

— ಥಾಮಸ್ ಹಾರ್ಡಿ

ವುಡ್‌ಲಾಂಡ್ಸ್ ಅವೋಸ 6 ನೇ ವಾರ

ರಾಜೇಂದ್ರಕುಮಾರ್ ಆಫೀಸುವ ರೋಸ್ ಮೂವೀಸ್‌ರವರ

ಹಿಂದಿ ಕಲರ್ ಅತ್ಯಮೋಘ ಚಿತ್ರ

ಜವಾನಿ ದಿವಾನಿ

ಪಾತ್ರ – ರಣಧೀರ್ ಕಪೂರ್, ಜಯಬಾಧುರಿ ದಿನ 3 ಪ್ರದರ್ಶನಗಳು

ಅಪೂರ್ವ 4 ನೇ ವಾರ
ಬಾಂಧವ್ಯ

ಪಾತ್ರ – ಅಶ್ವತ್ಥ್, ಗಂಗಾಧರ್, ರಾಜೇಶ್, ಬಿ. ವಿ. ರಾಧ, ಪಂಡರೀಬಾಯಿ, ಸಂಧ್ಯಾರಾಣಿ, ಜಯಶ್ರೀ, ರಮಾದೇವಿ ದಿನ 3 ಪ್ರದರ್ಶನಗಳು

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸರಿಯಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಬೊಚ್ಚಲು ಚಿತ್ರ

ಆನೆ - ಹುಡುಗ

ಭಾರತದಲ್ಲಿ ಗೋವಧೆ ಪೂರ್ಣ ನಿಶೇಧವಾಗಲಿ

Edited Printedand Published by Dharmapracharanirata M S Krishna Rao (Propretor) at the Satvvad Press, Chamarajapuram Mysore

ಮೈಸೂರು ದಸರಾ ವಸ್ತುಪ್ರದರ್ಶನ

ಮತ್ತು

ಕೆಗಾರಿಕಾ ಮೇಳ 1972

ಸಾಂಸ್ಕೃತಿಕ ಕಾರ್ಯಕ್ರಮ 10-11-72 ಶುಕ್ರವಾರ

ಕಲಾಕ್ಷೇತ್ರ

6 ರಿಂದ 8 ಸಂಜೆ	ಶ್ರೀ ಡಿ. ಶೇಷಪ್ಪ ಮತ್ತು ವೃಂದ ಮೈಸೂರು	ತಾಳವಾದ್ಯ ಕಛೇರಿ
8 ರಿಂದ 9-30	ಶ್ರೀ ಭಾರತಿ ಕಲಾನಿಕೇತನ್, ಮೈಸೂರು	ನೃತ್ಯ

ಜೀವನರಾಯನ ಕಟ್ಟೆ

6 ರಿಂದ 7 ಸಂಜೆ	ಶ್ರೀಮತಿ ಪಿ. ಗಾಯತ್ರಿ, ಕಡೂರು	ಸಂಗೀತ
7 ರಿಂದ 8	ಕುಮಾರಿ ಎಸ್. ರೂಪ, ಮೈಸೂರು	ನೃತ್ಯ
8 ರಿಂದ 9-30	ಶ್ರೀಮತಿ ಜಿ. ಎಸ್. ಕಮಲ ಮತ್ತು ಜಿ. ಎಸ್. ರಾಜಲಕ್ಷ್ಮಿ, ಮೈಸೂರು	ಸಂಗೀತ

ಹೆಚ್. ಆರ್. ಗಂಗಣ್ಣ,
ಕಾರ್ಯದರ್ಶಿ, ದಸರಾ ವಸ್ತುಪ್ರದರ್ಶನ ಸಮಿತಿ, ಮೈಸೂರು

SHAKTI SUDHA

A Superb Tonic

Contribute Liberally to the National Defence Fund

Quality Printing Neat Binding

Lakshminarasimha Press

Sivarampet, Mysore